# ಸಂಕ್ರಾಂತಿ

ಯಮನ ಅಯನವ ಕಳಿಯಲು
ಉತ್ತರನು ಬಂದಿಹನು
ಸೂರ್ಯ ಮಕರದಿ ಉದಯಿಸಲು
ಕಳೆದ ಅಯನದ ದುಃಖವ ಮರೆತು, ನಾನು ಎಂಬುದ ಬಿಟ್ಟು
ಎಲ್ಲರಲಿ ಬೆರೆತೆವು
ನಾವು ಎಂಬುದ ಅರಿತೆವು.

ಮನೆಮನೆಗೆ ನುಗ್ಗಿ ಮನಮನದಿ ಹಂಚಿ ಸಿಹಿ ಹುಗ್ಗಿ
ಎಳ್ಳು ಬೆಲ್ಲದ ಪ್ರೀತಿಯಿಂದ ಅವರೆಲ್ಲರ ಜಗ್ಗಿ
ಸಂತೋಷ ಹಂಚುತ್ತ ಮನಮನಕೆ
ಮುದವ ನೀಡುತ್ತ
ಸ್ವರ್ಗವ ಧರೆಗೆ ತರುವದಕೆ
ನೀವೂ ಬನ್ನಿರಿ ಇತ್ತ.

ಕೂಡಿ ಆಚರಿಸಲು ಈ ರೀತಿ ಸಂಕ್ರಮಣ
ನಡುವೆ ಬಂದು ಕುಣಿಯುವ ಆ ರಮಾರಮಣ.

**ಸಂಕ್ರಾಂತಿ ಹಬ್ಬದ ಶುಭಾಶಯಗಳು.**

ಪ್ರವೀಣ. ಹುನಗುಂದ
ಜಯತೀರ್ಥ ವಿದ್ಯಾಪೀಠ